ತಾಲ್ಲೂಕು ಕಛೇರಿಯಲ್ಲಿ ಹರಾಜ್ ಮಾಕಲ್ಪಡುತ್ತೆ. ಯಿಷ್ಟ್ಯವುಳ್ಳವರು ಸದರೀ ಟೈಂಗೆ ಹಾಜರಾಗಿ ಧಾರಾಳವಾಗಿ ಸವಾಲ್ಮಾಡಬಹುದು.

1 ಟೈಂ ಅತಿಕ್ರಮಿಸಿ ಬರುವ ಸವಾಲ್ ಮಂಜೂರು ಮಾಡುವದಿಲ್ಲ.

2 ಹರಾಜು ಕೈದಾದ ಕೂಡ್ಲೆ ಆಬ್ಬೈರು ಚಡ ಸವಾಲ್‌ದಾರನು ಶೇಕಡಾ 25 ರೂಪಾಯಿ ತೆವಣಿ ಹಾಜರ್ಮಾಡಬೇಕು. ಹರಾಜು ಮಂಜೂರಾದ ವಡನೇ ಬಾಕಿ ಮೊಬಲಗು ಹಾಜರ್ಮಾಡಲು ಖಾತರ್ ಜಾಮೀನು ಕೊಡಬೇಕು.

3 ಮೇಲ್ಕಂಡ ಪರತ್ತಿಗೆ ತಪ್ಪಿದರೆ ಕೂಡ್ಲೆ ದುಸರಾ ಹರಾಜು ಮಾಡಿಸಿ ಪುಂಟಾಗುವ ಲುಕ್ಸಾನಿಗೆ ಮೊದಲು ಸವಾಲ್‌ದಾರನಿಗೆ ಗುರಿಮಾಡಲ್ಪಡುತ್ತೆ.

4 ಬಾಬು ಸುಫರ್ದು ಮಾಡತಕ್ಕ ವಿಷಯದಲ್ಲಿ ಡಿಸ್ಟ್ರಿಕ್ಟ್ ಹುಜೂರು ಹುಕ್ಕುಂ ಪಡದು ಮಂಜೂರ್ಮಾಡಲ್ಪಡುತ್ತೆ.

5 ಜಂಗಲ್ ಶಿತಾಫಲ ಪಸಾರೆ ಬಾಬನ್ನು ಈ ಸಾಲ್ ಡಿಸಂಬರು ಆಕ್ಕೈರುವಳಗಾಗಿ ರೂಡಿಸಿಕೊಳ್ಳಬೇಕು. ನಂತರ ಪ್ರವೇಶ ಮಾಡಕೂಡದು.

6 ಜಂಗಲಿನಲ್ಲಿ ಯಿರುವ ಗಿಡಗಳನ್ನ ಖಲಲ್ ಮಾಡಕೂಡದು ಫಸಲ್ ಮಟ್ಟಿಗೆ ರೂಡಿಸಿ ಕೊಳ್ಳತಕ್ಕದ್ದಾಗಿರುತ್ತೆ.

ಬಿ. ಕೃಷ್ಣಯ್ಯಂಗಾರ್,
ಫಾರ್ ಡಿಪ್ಯೂಟಿ ಕಮ್ಮಿಷನರ್.

ನೊ ಟೀಸ.

ಕ್ಯಾಸರೀನಾ ಸೊಪಿಗಳು.

ತಾರೀಖು 27ನೇ ಮಾಹೆ ಜುಲೈ 1890.

1. ಪೀಣ್ಯ, ಗುಬ್ಬಿ, ಕೊಡಗಿಹಳ್ಳಿ ಮತ್ತು ಮಾಲೂರು ಪ್ಲಾಂಟೇಷ್ಣಗಳ ನರಸರಿಗಳಲ್ಲಿ ಸುಮಾರು 10 ಲಕ್ಷ ಕ್ಯಾಸರೀನಾ ಸೊಪಿಗಳು ಖರೀದಿಗೆ ದೊರಿಯುತ್ತವೆ.

2. ಈ ಸೊಪಿಗಳು ಯತ್ತರದಲ್ಲಿ 1 ಅಡಿ ಲಾಗಾಯತು $1\frac{1}{2}$ ಅಡಿ ವರಿವಿಗೆ ಯಿವೆ, ದರ 1,000ಕ್ಕೆ 0—8—0 ಯಂತೆ ಖರೀದಿ ಮೊಬಲಗು ಪಾವತಿ ಮಾಡಿದವರಿಗೆ ಕೊಡಲ್ಪಡುತ್ತವೆ.

3. ಈ ವಿಷಯದಲ್ಲಿ ಯಿನ್ನೇನಾದರು ತಪಸೀಲ್ ತಿಳಿಯಬೇಕಾಗಿ ಯಿದ್ದಲ್ಲಿ ಬೆಂಗಳೂರು ಕೊಟೇಯಲ್ಲಿ ಯಿರುವ ನಮ್ಮ ಆಫೀಸಿಗೆ ಅರ್ಜಿಬರದು ಕೊಳ್ಳಬಹುದು.

ಯಸ್. ಯಿ. ಬಾಪೂರಾವ್,
ಅಸಿಸ್ಟೆಂಟ್ ಕ್ವಸರ್ವೇಟರ್ ಪ್ಲಾಂಟೇಷ್ಣ.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 7ನೇ ಆಗಸ್ಟು 1890.

ಯಿದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸಾಲೆಹಾಲ್ ವಿಕೃತಿ ಸಂವತ್ಸರಕ್ಕೆ ದಾಖಲಾಗತಕ್ಕ ಗೋರಿಬಿದನೂರು ತಾಲ್ಲೂಕು ಜಂಗಲಿಪಸಾರೆಗೆ ಸಂಮ್ಮಧಪಟ್ಟ ಈ ಕೆಳಗೆ ಕಂಡ ಬಾಬುಗಳು ಮಾಮೂಲ್ ಅನುಸರಿಸಿ ಬರುವ ಕಪ್ಪಂಬರ್ ತಿಂಗಳು 15ನೇ ತಾರೀಖು ದಿದಿ 12 ಘಂಟೆಗೆ ಗೋರಿಬಿದನೂರು ತಾಲ್ಲೂಕು ಕಛೇರಿಯಲ್ಲಿ ಅಮಲ್‌ದಾರ್ ಅಥವಾ ಶಿರಸ್ತೆದಾರ್ ರೂಬರೂ ಹರಾಜ್ ಹಾಕಲ್ಪಡುತ್ತೆ ಯಿಷ್ಟವುಳ್ಳವರು ಸದರೀ ಟೈಂಗೆ ಹಾಜರಾಗಿ ಧಾರಾಳವಾಗಿ ಸವಾಲ್ ಮಾಡಬಹುದು.

ಬಾಬುಗಳ ಹೆಸರು.

1 ಶೀತಾಫಲ	1 ಕಲ್ಲುಹುಣ್ಣಿ
1 ಪತಂಗಚಕ್ಕೆ	1 ತಾರೆಕಾಯಿ
1 ಕಪಿಲಾರಂಗ ಬುಕಣಿ	1 ಅಳಲೆಕಾಯಿ
1 ಹುಚ್ಚೆಹರಳು	1 ಜೇನು ತುಪ್ಪ
1 ಗೇರುಬೀಜ	1 ಜೇನು ಮೈಣ
1 ತಗರಿ ಬೀಜಾ	1 ಬೀಳುಚಮರ್ಕಿ
1 ದಿಂಡಗದ ಬಂಕೆ	1 ಚಟ್ಟದಂಗೆ ಕಾಯಿ

1. ಟೈಂ ಅತಿಕ್ರಮಿಸಿಬರುವ ಸವಾಲ್ ಮಂಜೂರ್ಮಾಡುವದಿಲ್ಲ.

2. ಹರಾಜು ಕೈದಾದ ಕೂಡ್ಲೆ ಆಬ್ಬೈರ್ ಚಡ ಸವಾಲ್‌ದಾರನು ಶೇಕಡಾ 25 ರೂಪಾಯಿ ತೇವಣಿ ಹಾಜರಮಾಡಬೇಕು ಮತ್ತು ಹರಾಜು ಡಿಪ್ಯೂಟಿ ಕಮ್ಮಿಷನರ್ ಸಾಹೇಬರವರಿಂದ ಮಂಜೂರಾದ ವಡನೆ ಬಾಕಿ ಮೊಬಲಗು ಹಾಜರ್ ಮಾಡಲು ಖಾತರ್ ಜಾಮೀನು ಕೊಡಬೇಕು.

3. ಮೇಲ್ಕಂಡ ಷರತ್ತಿಗೆ ತಪ್ಪಿದರೆ ಕೂಡ್ಲೆ ದುಸರಾ ಹರಾಜು ಮಾಡಿಸಿ ಅದರಿಂದ ಮುಂಟುಗುವ ಲುಕ್ಸಾನ್ ಮೊದಲು ಸವಾಲ್ದಾರನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

4. ಬಾಬು ಸುಫರ್ದು ಮಾಡತಕ್ಕ ವಿಷಯದಲ್ಲಿ ಡಿಸ್ಟ್ರಿಕ್ಟ್ ಹುಜೂರು ಹುಕ್ಕುಂ ಪಡೆದು ಮುಂಜೂರ್ಮಾಡಲ್ಪಡುತ್ತೆ.

5. ಜಂಗಲ್ ಕೀತಾಫಲ ವಗೈರೇ ಮೇಲ್ಕಂಡ ಪಸಾರೆ ಬಾಬನ್ನು ಈ ಸಾಲ್ ಡಿಸೆಂಬರ್ ಆಖೈರುವಳಗಾಗಿ ರೂಢಿಸಿಕೊಳ್ಳಬೇಕು ನಂತರ ಪ್ರವೇಕವಾಡಕೂಡದು.

6. ಜಂಗಲ್‌ನಲ್ಲಿ ಇರುವ ಗಿಡಗಳನ್ನ ಖಲಲ್ ಮಾಡಕೂಡದು ಫಸಲ್ಟ್ಟಮಟ್ಟಿಗೆ ರೂಢಿಸಿ ಕೊಳ್ಳತಕ್ಕದ್ದಾಗಿ ಯಿರುತ್ತೆ.

ಸಿ. ಮೊದಯ್ಯ,
ಡೆಪ್ಯೂಟಿ ಕಮ್ಮಿಷನರ್.

ಪ್ರಕಟನೆ.

ಮೈಸೂರು ಷಹರ್ ಮ್ಯುನಿಸಿಪ್ಯಾಲಿಟಿಗಾಗಿ ಒಬ್ಬ ವೊವರ್ಸೀರ್ ಬೇಕಾಗಿರುತ್ತೆ, ತಲಬು ರೂ. 25 ಮತ್ತು ಲರ್ನಸಿ ರೂ. 10. ಅಪ್ಲಿಕೇರ್ಷಗಳನ್ನ ಸ್ರ್ 1890ನೇ ಇಸವಿ ಆಗಸ್ಟ್ 15ನೇ ತಾರೀಖು ವಳಗಾಗಿ ಈ ಕೆಳಗೆ ರುಜು ಮಾಡಿರುವವರ ಬಳಿಗೆ ಕಳುಹಿಸತಕ್ಕದ್ದು.

ಸ್ಟ್ಯಾಂಡಿಷ್ ಲೀ,
ಮೈಸೂರ ಮ್ಯುನಿಸಿಸಿಲ್ ಬೋರ್ಡ್
ವೈಸ್ ಪ್ರೆಸಿಡೆಂಟ್.

ಮೈಸೂರು,
ತಾರೀಖು 31ನೇ ಜುಲೈ 1890.

ಹಾಸನ ಡಿಸ್ಟ್ರಿಕ್ಟ್.

1890ನೇ ಇಸವಿ 25ನೇ ಜುಲೈ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

ಹಾಸನ ಡಿಸ್ಟ್ರಿಕ್ಟ್ ಅರಕಲ್‌ಗೂಡು ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜಮಾಯಿಸಿಕ್ಕೊಳ್ಳತಕ್ಕ ಹಕ್ಕುದಾರಿಯು ತಾಲ್ಲೂಕು ಕಚ್ಚೇರಿಯಲ್ಲಿ ಸ್ರ್ 1890ನೇ ಇಸವಿ ಸೆಪ್ಟಂಬರ್ ತಾರೀಖು 1ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

2. ಆಮಲ್ದಾರ್ರು ಅಥವಾ ಶಿರಸ್ತೇದಾರ್ರಾಗಲಿ ಹರಾಜು ಮಾಡಿಸುವರು.

3. ಈ ಹರಾಜಿನ ಚಡ ದರಖಾಸ್ತು ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರಿಂದ ಮುಂಜೂರ್ ಮಾಡುವ ಪರಿಯಂತ್ರ ಖಾಯಂ ಆದ್ದಾಗಿ ತಿಳಿದುಕೊಳ್ಳಕೂಡದು.

4. ಈ ಇಜಾರೆಯು ಸ್ರ್ 1891ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿ ಇರತಕ್ಕದ್ದು.

5. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡಬೇಕಲ್ಲದೆ ಹರಾಜು ಮುಂಜೂರ್ಮಾಡಲ್ಪಟ್ಟ ಸಂಗತಿ ಡೆಪ್ಯೂಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದೊಳಗಾಗಿ ಕ್ರಯದ ಪೊಟ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಬಂದಾಣೆಯಂತೆ ಆಗುವ ಲೋಕಲ್‌ಸೆಸ್ ದೇಖೀಲ್ ಬಾಕಿ ಕ್ರಯದ ಮೊಬಲಗನ್ನ ಫಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಯಿಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕ್ಕೊಳ್ಳಲ್ಪಡುವದು. ಹಾಂಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡದಿದ್ದರು ಅಥವಾ ಬಾಕಿ ಕ್ರಯದ ಮೊಬಲಗು ಹಾಜರ್ಮಾಡದಿದ್ದರು ಹಕ್ಕುದಾರಿಯು ಅವ್ವಲ್ ಕ್ರಯದಾರನ ಖರ್ಚಿಗು ಮತ್ತು ನುಕ್ಸಾನಿಗೂ ವಳಪಟ್ಟು ಪುನಹ ವಿಕ್ರಯಿಸಲ್ಪಡುವದು.

6. ಹರಾಜು ಷರತ್ತುಗಳು.

(a.) ಹಿಡುವಳಿ ಜಮೀನಿನಲ್ಲಿ ಯಿರತಕ್ಕ ಕಲ್ಲುಗಳನ್ನ ತೆಗದುಕ್ಕೊಳ್ಳ ಬೇಕಾದರೆ ಹಿಡುವಳೀದಾರನ ಸಮ್ಮತಿಯನ್ನ ಪಡಿಯಬೇಕು, ಜಮೀನು ಹಿಡುವಳೆದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲು ಕೂಡದು ಇಜಾರೆದಾರನಿಗೆ ಮಾರಬೇಕೆ ಹೊರ್ತು ಇತರ ಜನಗಳಿಗೆ ಮಾರಲು ಕೂಡದು.

(b.) ಇಜಾರೇದಾರನು ಹುಲ್ಲುಬನ್ನಿ ಇಜಾರೆದಾರರ ಚಕ್ರಾವ್ರು ಹಕ್ಕಿನಲ್ಲಿ ಪ್ರವೇಸಿಸ ಕೂಡದು.

(c.) ಬಂಜರು ಜಮ್ರ್ಗಳು ಸಾಗುವಳಿ ಬಗ್ಯೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟು ಬಿಡುವದಕ್ಕೆ ಕುರಂಗದ ಇಜಾರೆದಾರನು ಅಡ್ಡಿ ಹೇಳಕೂಡದು. ಅಂಥಾ ಜಮೀನುಗಳಲ್ಲಿ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕುಮಾತ್ರ ಇಜಾರೆದಾರನಿಗೆ ವುಳದಿರುತ್ತೆ.

(d.) ಈ ಇಜಾರೆದಾರನು ಕಲ್ಲುಗಳಿಗೋಸ್ಕರ ಜಮ್ರ್ಗಳನ್ನ ಆಗಿಯಕೂಡದು. ಬಂದುವೇಳೆ ಹಾಗೆ ಆಗದಲ್ಲಿ ಆ ಗುಂಡಿಗಳನ್ನ ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮ್ರ್ ಲಾಯಕ್ ಯಿರುವ ಹಾಂಗೆ ಮಾಡಬೇಕು.

ಪಿ. ಯರ್. ಪೂರ್ಣಯ್ಯ,
ಡೆಪ್ಯೂಟಿ ಕಮ್ಮಿಷನರ್.